# ಅಸಮಾನತೆಯ ಸಮವಸ್ತ್ರ ನೀತಿ



■ ರೇಷ್ಮಾ. ಎ.ಎಸ್.

ಬಸ್‌ನಲ್ಲಿ ಪ್ರಯಾಣಿಸುತ್ತಿರುವಾಗ ನಾಲ್ಕು ರೀತಿಯ ವಿವಿಧ ಸಮವಸ್ತ್ರ ಧರಿಸಿದ ಮಕ್ಕಳು ಬಸ್ ಹತ್ತಿ ನನ್ನ ಸನಿಹವೇ ನಿಂತರು. ಸುಮ್ಮನೆ ಕುತೂಹಲದಿಂದ ಅವರೆಲ್ಲ ಯಾವ ಯಾವ ಶಾಲೆಗಳಲ್ಲಿ ಕಲಿಯುವುದೆಂದು ವಿಚಾರಿಸಿದಾಗ ಎಲ್ಲರೂ ಒಂದೇ ಶಿಕ್ಷಣ ಸಂಸ್ಥೆಗೆ ಸೇರಿದವರೆಂಬ ಉತ್ತರ ಬಂದಾಗ ಅಚ್ಚರಿಯೆನಿಸಿತು. ಒಂದೇ ಶಿಕ್ಷಣ ಸಂಸ್ಥೆಯಾದರೂ ನಾಲ್ಕು ರೀತಿ ಸಮವಸ್ತ್ರವೇಕೆ? ಎಂದು ಪ್ರಶ್ನಿಸಿದಾಗ ಮಕ್ಕಳು ಹೇಳಿದ್ದು ಹೀಗೆ- ಒಂದರಿಂದ ನಾಲ್ಕನೇ ತರಗತಿವರೆಗೆ ಕನ್ನಡ ಮೀಡಿಯಂ ಮಕ್ಕಳಿಗೆ ಒಂದು ರೀತಿ ಸಮವಸ್ತ್ರ, ಇಂಗ್ಲಿಷ್ ಮಾಧ್ಯಮದ ಮಕ್ಕಳಿಗೆ ಇನ್ನೊಂದು, ಐದರಿಂದ ಏಳನೇ ತರಗತಿವರೆಗೆ ಕನ್ನಡ ಮಾಧ್ಯಮದವರಿಗೊಂದು, ಇಂಗ್ಲಿಷ್ ಮಾಧ್ಯಮದವರಿಗೆ ಮತ್ತೊಂದು!

ಇದಲ್ಲದೆ ಅದೇ ಶಿಕ್ಷಣ ಸಂಸ್ಥೆಯ ಹೈಸ್ಕೂಲು ಹಾಗೂ ಪದವಿ ಪೂರ್ವ ತರಗತಿಗಳಿಗೂ ಇನ್ನೂ ಇದೇ ರೀತಿ ನಾಲ್ಕು ಬಗೆಯ ಬೇರೆ ಬೇರೆ ಸಮವಸ್ತ್ರಗಳಿವೆಯಂತೆ. ಕೇಳಿ ನಾನು ಸುಸ್ತಾದೆ. ಗಮನಿಸಿದರೆ ಇಂಗ್ಲಿಷ್ ಮಾಧ್ಯಮದ ಮಕ್ಕಳಿಗೆ ಅವರ ಸಮವಸ್ತ್ರದ ಮೇಲೊಂದು ಬಣ್ಣದ ಕೋಟು, ಟೈ, ಶೂಸ್, ಸಾಕ್ಸ್, ಕಂಪಲ್ಸರಿ. ಅವೆಲ್ಲ ಸ್ವಲ್ಪ ಉತ್ತಮ ಬಟ್ಟೆಯವು, ಕನ್ನಡ ಮಾಧ್ಯಮದವರಿಗೆ ಕೋಟಿಲ್ಲ, ಬಟ್ಟೆಬರೆಗಳೂ ಅಷ್ಟೇನೂ ಉತ್ತಮ ದರ್ಜೆಯವಲ್ಲ.

ಇಷ್ಟೇ ಅಲ್ಲದೆ, ಶನಿವಾರಗಳಂದು ಪ್ರತಿ ತರಗತಿಗಳಿಗೂ ಬೇರೆ ಬೇರೆಯೇ ಬಣ್ಣದ ಟೀ ಶರ್ಟ್‌ಗಳು ಜೊತೆಗೆ ಬಿಳಿ ಸ್ಕರ್ಟ್. ಚಡ್ಡಿಗಳು/ ಇಲ್ಲವೇ ಬಿಳಿ ಸಮವಸ್ತ್ರ, ಸರಕಾರಿ ಶಾಲೆಗಳಲ್ಲೂ ಕೂಡ ಸರ್ಕಾರ ನೀಡುವ ಸಮವಸ್ತ್ರ ಒಂದೆರಡು ದಿನವಾದರೆ ಶಾಲೆಗಳೇ ನಿಗದಿ ಪಡಿಸಿರುವ ಸಮವಸ್ತ್ರ ಒಂದೆರಡು ದಿನ, ಬಿಳಿಯ ಉಡುಪು ಅಬ್ಬಬ್ಬ ತಲೆ ಕೆಟ್ಟೇ ಹೋಗುವಂತಾಯ್ತು.

ಕಾರಣ ಕೇಳಿದರೆ ಬರುವ ಉತ್ತರವೇನು ಗೊತ್ತೇ- ಎಲ್ಲೇ ನೋಡಿದ್ರೂ ಕೂಡಲೇ ಯಾವ ಕ್ಲಾಸು, ಯಾವ ವಿಭಾಗ ಅಂತ ಕೂಡಲೇ ತಿಳೀಬೇಕಲ್ಲ- ಅದಕ್ಕೆ.

ಹಾಗಿದ್ರೆ 'ಯೂನಿಫಾರಂ ಯೂನಿಫಾರ್ಮಿಟಿ' ಇದರ ಅರ್ಥವೇನು? ಸಮವಸ್ತ್ರ- ಸಮಾನತೆಯ ಭಾವನೆ ಮೂಡಿಸಲು, ಬಡವ ಶ್ರೀಮಂತ ಎಂಬ ಭಾವನೆ ಮಕ್ಕಳಲ್ಲಿ ಮೂಡದಿರಲಿ ಎಂದೇ ತಾನೇ ಸಮವಸ್ತ್ರ ಮಾಡಿರುವುದು? ಆದರೆ ಅದರಲ್ಲೂ ಕನ್ನಡ ಮಾಧ್ಯಮಕ್ಕೆ ಒಂದು ರೀತಿ, ಇಂಗ್ಲಿಷ್ ಮಾಧ್ಯಮಕ್ಕೆ ಒಂದು ರೀತಿ ಅದೂ ಒಂದೇ ಶಿಕ್ಷಣ ಸಂಸ್ಥೆಗಳಲ್ಲಿ ಅದೇಕೆ? ಕನ್ನಡ-ಇಂಗ್ಲಿಷ್ ಮಾಧ್ಯಮಗಳ ಮಕ್ಕಳ ನಡುವೆ ಇಂತಹ ತಾರತಮ್ಯಗಳೇಕೆ? ಕೋಟು, ಟೈ- ಇನ್ನೂ ಏನೇನೋ. ವಿಚಿತ್ರ ರೆಕ್ಕೆಪುಕ್ಕ ಅಂಟಿಸಿ ಇಂಗ್ಲಿಷ್ ಮಾಧ್ಯಮದವರು ಕನ್ನಡ ಮಾಧ್ಯಮದವರಿಗಿಂತ ಭಿನ್ನ- ಮಿಗಿಲು-ವಿಶಿಷ್ಟ' ಎಂದು ಬಿಂಬಿಸುವುದರ ಹಿಂದೆ ಇರುವ ಹುನ್ನಾರಗಳೇನು? ತಂತ್ರಗಳೇನು? ಸ್ವಾರ್ಥಗಳೇನು? ಕನ್ನಡ ಮಾಧ್ಯಮಕ್ಕೆ ಸೇರುವ ಬಡವರ್ಗದ ಮಕ್ಕಳು, ಸಾಧಾರಣವಾದ ಸಮವಸ್ತ್ರ ತೊಟ್ಟು, ಉತ್ತಮ ದರ್ಜೆಯ ವಿಭಿನ್ನ ಬಣ್ಣದ ಸಮವಸ್ತ್ರ, ಕೋಟು ಇನ್ನಿತರ ಸ್ಪೆಷಲ್ ಎಫೆಕ್ಟ್ ಟಚ್ ಎಕ್ಸ್‌ಟ್ರಾಗಳನ್ನು ಧರಿಸಿ ಕಾರು ಮೋಟಾರ್ ಸೈಕಲ್‌ಗಳಲ್ಲಿ ಅಪ್ಪಂದಿರು ತಂದು ಬಿಟ್ಟು ಹೋಗುವ ಮಿಂಚುವ, ಇಂಗ್ಲಿಷ್ ಮಾಧ್ಯಮದ ಮಕ್ಕಳನ್ನು ನೋಡಿ ಅನುಭವಿಸುವ ಕೀಳರಿಮೆ ಬೇಕೆಂದೇ ಸೃಷ್ಟಿಸಿರುವ ವಿಕೃತಿಯಲ್ಲವೇ?

ಒಂದು ಶಿಕ್ಷಣ ಸಂಸ್ಥೆಯ ಮಕ್ಕಳೆಲ್ಲ ಒಂದೇ ರೀತಿಯ ಸಮವಸ್ತ್ರ ಧರಿಸುವ ಬದಲು ತರಗತಿಗೊಂದರಂತೆ ವಾರ, ದಿನಗಳಲ್ಲಿ ಒಂದೊಂದು ರೀತಿಯ ವಿಭಿನ್ನ ದಿರಿಸು ಧರಿಸುವಂತೆ ಮಾಡುವ ಮನಸ್ಸುಗಳ ಹಿಂದಿರುವ ಸ್ವಾರ್ಥವೇನೋ?

ಪೋಷಕರೂ ಸಹ ಇದನ್ನು ಪ್ರಶ್ನಿಸುವ ಗೋಜಿಗೆ ಹೋಗುವುದಿಲ್ಲ. ಕೆಲವು ಪೋಷಕರಿಗೆ ಇದು ಅಂತಸ್ತಿನ ಪ್ರಶ್ನೆ. ತಮ್ಮ ಕಾರಿನಲ್ಲಿ ಬರುವ ಮಗನೂ, ತಮ್ಮ ಬಂಗ್ಲೆ ಕಾಯುವ ವಾಚ್‌ಮನ್ ಮಗ, ಮನೆ ಕೆಲಸದ ಹೆಂಗಸಿನ ಮಗಳೂ ಒಂದೇ ಸಮವಸ್ತ್ರ ಧರಿಸಿ ಬರುವುದೆಂದರೇನು? ಇಂಗ್ಲಿಷ್ ಮಾಧ್ಯಮದ ಮಕ್ಕಳಿಗೆ ಯೂನಿಫಾರಂ ಡಿಫರೆಂಟ್ ಆಗಿರಲಿ ಎಂದು ಅವರೇ ಒತ್ತಾಯಿಸುವುದುಂಟು. ಇಂತಹ ಮನಸ್ಸುಗಳ ಲಾಭ ಪಡೆಯಲೆಂದೇ ಆಡಳಿತ ಮಂಡಳಿಯವರು ಇಂಗ್ಲಿಷ್ ಮಾಧ್ಯಮಕ್ಕೆ ಹೆಚ್ಚು ಫೀಸ್, ಹೆಚ್ಚು ಡೊನೇಷನ್, ಹೆಚ್ಚು ಬೆಲೆಯ ವಿಭಿನ್ನ ಯೂನಿಫಾರಂ ಎಲ್ಲ ನಿಗದಿಪಡಿಸಿ ಬಡವರ ಮಕ್ಕಳು ಇಂಗ್ಲಿಷ್ ಮಾಧ್ಯಮಕ್ಕೆ ಸೇರದಂತೆ ಮಾಡುವಲ್ಲಿ ಅವರನ್ನು ಉಳ್ಳವರ ಮಕ್ಕಳಿಂದ ಬೇರ್ಪಡಿಸುವಲ್ಲಿ ಸಫಲರಾಗುವುದಲ್ಲದೆ. ತಮ್ಮ ಕಿಸೆಯನ್ನು ಭರ್ತಿ ಮಾಡಿಕೊಳ್ಳುತ್ತಾರೆ.

ಕಲಿಕಾ ಮಾಧ್ಯಮಗಳ ಮೂಲಕ ವಿದ್ಯಾರ್ಥಿ ಜಗತ್ತನ್ನು ಒಡೆದಿರುವ, ಖಾಸಗಿ, ಸರ್ಕಾರಿ ಶಾಲಾ ಕಾಲೇಜು ಎಂಬ ವಿಂಗಡಣೆಯಿಂದ ವಿದ್ಯಾರ್ಥಿಗಳಲ್ಲಿ ಕಂದರ ಸೃಷ್ಟಿಸಿರುವ, ಏಕರೂಪದ ಪಠ್ಯಕ್ರಮವಲ್ಲದೆ ವಿದ್ಯಾರ್ಥಿಗಳಲ್ಲಿ ಅಂತರ ಸೃಷ್ಟಿಸಿರುವ ವ್ಯವಸ್ಥೆ 'ಯೂನಿಫಾರಂ' ಎಂಬ ಹೆಸರಿನಲ್ಲಿ ವಿದ್ಯಾರ್ಥಿ ಜಗತ್ತಿನಲ್ಲಿ 'ಅಸಮಾನತೆಯನ್ನು' ಬಿತ್ತಿ ಬೆಳೆಯುತ್ತಿರುವುದು ಶಿಕ್ಷಣ ಕ್ಷೇತ್ರದ ದುರಂತಗಳಲ್ಲೊಂದು.